**ಅ.ದಾ. ಸಂ. 78/2011 PW-1**

**<u>ದಿನಾಂಕಃ 18.06.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.</u>**

<u>ಪಾಟೀ ಸವಾಲು 1 ರಿಂದ 3 ನೇ ಪ್ರತಿವಾದಿ ಪರ ಶ್ರೀ. ಹೆಚ್.ಆರ್. ವಕೀಲರಿಂದಃ-</u>

ನಾನು ಓದು ಬರಹ ಕಲಿತಿಲ್ಲ. ದಾವಾ ಆಸ್ತಿಯ ಸರ್ವೆ ನಂಬರ್ ಮತ್ತು ವಿಸ್ತೀರ್ಣ ಹೇಳುವಿರಾ ಎಂದರೆ ಸಾಕ್ಷಿ ಹೌದು ಎಂದು ನುಡಿದು ಸರ್ವೆ ನಂ.315/6 ವಿಸ್ತೀರ್ಣ 1 ಎಕರೆ 1 ಗುಂಟೆ ಎಂದು ನುಡಿಯುತ್ತಾರೆ. ನನಗೆ ಚೆಕ್ಕುಬಂದಿ ಹೇಳಲು ಗೊತ್ತಾಗುವುದಿಲ್ಲ, ಆದರೆ ಸೂರ್ಯ ಹುಟ್ಟುವ ದಿಕ್ಕಿಗೆ ರಸ್ತೆ, ಸೂರ್ಯ ಮುಳುಗುವ ಕಡೆ ಅರುಣ್ ಕುಮಾರ್ ರವರ ಜಮೀನು, ಉತ್ತರಕ್ಕೆ ಪುಟ್ಟಸ್ವಾಮಿರವರಿಗೆ ಸೇರಿದ ಜಮೀನು, ದಕ್ಷಿಣಕ್ಕೆ ಮಲ್ಲಿಕಾರ್ಜುನ್ ರವರಿಗೆ ಸೇರಿದ ಜಮೀನು. 4 ನೇ ಪ್ರತಿವಾದಿ ಲಿಂಗಮ್ಮ ರವರ ಹೆಸರು ಏನು ಎಂದು ಕೇಳಲು ಸಾಕ್ಷಿ ಸಿದ್ದೇಗೌಡ ಎಂದು ನುಡಿದು, ಅವರು ನನಗೆ ತಾತ ಆಗಬೇಕು ಎಂದು ನುಡಿಯುತ್ತಾರೆ. ತಮ್ಮ ತಾತ ಸಿದ್ದೇಗೌಡರಿಗೆ ಎಷ್ಟು ಜನ ಮಕ್ಕಳು ಎಂದರೆ ಸಾಕ್ಷಿ ನನ್ನ ತಂದೆ ಶ್ರೀನಿವಾಸ ಮತ್ತು ನನ್ನ ತಂದೆಯ ಸಹೋದರಿ ಲಿಂಗಮ್ಮ ಎಂದು ನುಡಿಯುತ್ತಾರೆ. ತಮ್ಮ ತಂದೆಯ ಸಹೋದರಿ ಲಿಂಗಮ್ಮ ಬದುಕಿರುತ್ತೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ನನ್ನ ತಂದೆಯ ಸಹೋದರಿ ಲಿಂಗಮ್ಮರವರನ್ನು ಈ ದಾವೆಯಲ್ಲಿ ಪಕ್ಷಗಾರಳಾಗಿ ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ದಾವಾ ತಯಾರು ಮಾಡಲು ವಕೀಲರಿಗೆ ಯಾರು ಮಾಹಿತಿ ಕೊಟ್ಟಿದ್ದಾರೆ ಎಂದರೆ ಸಾಕ್ಷಿ ನಾನೇ ಎನ್ನುತ್ತಾರೆ. ದಾವಾ ಆಸ್ತಿ ತಮ್ಮ ತಂದೆಗೆ ಹೇಗೆ ಬಂದಿರುತ್ತದೆ ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ನನ್ನ ತಾತನಿಂದ ಎಂದು ನುಡಿಯುತ್ತಾರೆ. ದಾವಾ ಆಸ್ತಿಯು ಮೂಲ ನನ್ನ ತಾತನದ್ದು ಎಂದು ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಮಾಡಿದ್ದೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ.

ತಮ್ಮ ತಾತನಿಗೆ ಒಟ್ಟು ಎಷ್ಟು ಎಕರೆ ಜಮೀನು ಇತ್ತು ಎಂದು ಕೇಳಲಾಗಿ ಸಾಕ್ಷಿ 2 ಎಕರೆ 1 ಗುಂಟೆ ಎಂದು ನುಡಿದು, ನನ್ನ ಅಜ್ಜಿ 4 ನೇ ಪ್ರತಿವಾದಿ ಮತ್ತು ನನ್ನ ತಂದೆ ಸೇರಿ 1 ಎಕರೆ ಜಮೀನನ್ನು ಮಾರಾಟ ಮಡಿದ್ದು, ಇನ್ನುಳಿಕೆ 1 ಎಕರೆ 1 ಗುಂಟೆ ಜಮೀನು ನನ್ನ ತಂದೆಯ ಹೆಸರಿಗೆ ಖಾತೆ ಆಗಿರುತ್ತದೆ ಎಂದು ನುಡಿಯುತ್ತಾರೆ. ನಮ್ಮ ಅಜ್ಜಿ ಮತ್ತು ನಮ್ಮ ತಂದೆ ನನ್ನ ತಾತನಿಗೆ ಸೇರಿದ 1 ಎಕರೆ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದು

ತಾವೇ ಹೇಳಿದ್ದು ಖರೀದಿದಾರರನ್ನು ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. 1 ಎಕರೆ ಜಮೀನನ್ನು ಮಾರಾಟ ಮಾಡಿರುವ ಬಗ್ಗೆ ನ್ಯಾಯಾಲಯಕ್ಕೆ ಕ್ರಯಪತ್ರ ಹಾಜರು ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಾನು ಸುಮಾರು 15 – 16 ವರ್ಷಗಳಿಂದ ಬೆಂಗಳೂರಿನಲ್ಲಿ ವಾಸ ಇರುತ್ತೇನೆ. 1 ರಿಂದ 3 ನೇ ಪ್ರತಿವಾದಿಯರು ಬೆಂಗಳೂರಿನಲ್ಲಿ ವಾಸ ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಂದೆ ಶ್ರೀನಿವಾಸ ಬದುಕಿರುವವರೆಗೂ 3 ನೇ ಪ್ರತಿವಾದಿ ಲಕ್ಷ್ಮಮ್ಮ ರವರ ಜೊತೆ ವಾಸ ಇದ್ದರು ಎಂದರೆ ಸಾಕ್ಷಿ ನನ್ನ ತಂದೆ ಶ್ರೀನಿವಾಸರವರ ಮೊದಲನೇ ಹೆಂಡತಿ ನನ್ನ ತಾಯಿ ನಾಗಮ್ಮ ರವರ ಜೊತೆ ವಾಸ ಇದ್ದರು ಎಂದು ನುಡಿದು, 3 ನೇ ಪ್ರತಿವಾದಿಯನ್ನು ನನ್ನ ತಂದೆ ಹಾಗೇ ಇಟ್ಟುಕೊಂಡಿದ್ದರು ಎಂದು ನುಡಿಯುತ್ತಾರೆ. ತಮ್ಮ ತಂದೆ ಶ್ರೀನಿವಾಸ 3 ನೇ ಪ್ರತಿವಾದಿಯ ಜೊತೆ ಅವರ ಮನೆಯಲ್ಲಿ ಇದ್ದಾಗ ತೀರಿಕೊಂಡಿದ್ದು ಎಂದರೆ ಸರಿಯಲ್ಲ. ದಾವಾ ಆಸ್ತಿ 1 ನೇ ಪ್ರತಿವಾದಿಯ ಹೆಸರಿಗೆ ಯಾವಾಗ ಖಾತೆ ಆಯಿತು ಎಂದು ಗೊತ್ತಾ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ದಾವಾ ಆಸ್ತಿ 3 ನೇ ಪ್ರತಿವಾದಿ ಮತ್ತು ಆಕೆಯ ಗಂಡ ಶ್ರೀನಿವಾಸರವರಿಗೆ ಸೇರಿದ ಸ್ವಯಾರ್ಜಿತ ಆಸ್ತಿಯೇ ಹೊರತು ತಮ್ಮ ಪಿತ್ರಾರ್ಜಿತ ಆಸ್ತಿ ಅಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಶ್ರೀನಿವಾಸ ಬದುಕಿದ್ದಾಗಲೇ 1 ನೇ ಪ್ರತಿವಾದಿಯ ಹೆಸರಿಗೆ ಬದಲಾವಣೆ ಮಾಡಿಕೊಟ್ಟಿದ್ದರು ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ 1 ರಿಂದ 3 ನೇ ಪ್ರತಿವಾದಿಯರು ಸ್ವಾಧೀನದಲ್ಲಿ ಇದ್ದರು ಎಂದರೆ ಸರಿಯಲ್ಲ. 5 ನೇ ಪ್ರತಿವಾದಿ ಪದ್ಮರವರಿಗೆ ದಾವಾ ಆಸ್ತಿಯನ್ನು ಪ್ರತಿವಾದಿ 1 ರಿಂದ 3 ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಾನು ಮತ್ತು ಪ್ರತಿವಾದಿ 1 ರಿಂದ 3 ಜಂಟಿ ಸ್ವಾಧೀನದಲ್ಲಿ ಇದ್ದೆವು ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ತಮಗೂ ಭಾಗ ಬರಬೇಕು ಎಂದು ಸುಳ್ಳು ದಾವೆ ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ನನ್ನ ತಂದೆ ಬದುಕಿದ್ದಾಗ ಚಿಕ್ಕಪುಟ್ಟೇಗೌಡರಿಗೆ ಬೋಗ್ಯ ಮಾಡಿದ್ದರುಎಂದರೆ ನನಗೆ ಗೊತ್ತಿಲ್ಲ. ಬೋಗ್ಯ ಪತ್ರವನ್ನು ಪ್ರತಿವಾದಿ 1 ರಿಂದ 3 ರವರು ತೀರುವಳಿ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ಹಾಜರು ಮಾಡಿರುವ ದಾಖಲೆಗಳೆಲ್ಲ ಸೃಷ್ಟಿ ಮಾಡಿರುವ ದಾಖಲಾತಿಗಳು

ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಇಲ್ಲದೇ ಇದ್ದರೂ ಸುಳ್ಳು ದಾವೆ ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ